ಎಂದಿಗೆ? ಏನೇನು ಯೋಚಿಸುತ್ತಿದ್ದಾಳೋ? ತೀರಾ ಹತ್ತಿರದ ಸಂಬಂಧಿಯೊಬ್ಬ ಎಡವಿ ಬಿದ್ದು ಜ್ಞಾನ ಕಳೆದುಕೊಂಡ ಎಂದು ಆಸ್ಪತ್ರೆಗೆ ಕರೆದೊಯ್ದರೆ ಅಲ್ಲಿ ಕೋಮಾದಲ್ಲಿದಾರೆ, ಏನೂ ಮಾಡಲಾಗದು ಎಂದರೂ ತಿಂಗಳುಗಟ್ಟಲೇ ಆಸ್ಪತ್ರೆಯಲ್ಲಿರಿಸಿಕೊಂಡು ಹೊರಲಾರದ ಬಿಲ್ಲು ಹೊರಿಸಿ ಜೊತೆಗೆ ಯಾವಾಗ ಬೇಕಾದರೂ ಕೋಮಾದಿಂದ ಹೊರ ಬರಬಹುದು ಅಥವಾ ಅದೇ ಸ್ಥಿತಿಯಲ್ಲಿಯೂ ಇರಬಹುದು ಎಂದು ಅಡ್ಡ ಗೋಡೆಯ ಮೇಲೆ ದೀಪವಿರಿಸಿ ಮನೆ ಮಂದಿಯನ್ನೆಲ್ಲಾ ಕಂಗಾಲು ಮಾಡಿ ಕಳಿಸಿದ್ದನ್ನ, ಆತ ಈಗಲೂ ಹಾಸಿಗೆಯಲ್ಲಿ ಉಸಿರಾಡುವ ದಿಂಬಿನಂತೆ ಬಿದ್ದುಕೊಂಡಿರುವುದನ್ನ, ಮನೆಗೆ ಮನೆಯೇ ಅಸ್ತವ್ಯಸ್ತವಾಗಿರುವುದನ್ನ ಕಣ್ಣಾರೆ ನೋಡಿದ್ದ. ಅಮ್ಮನಿಗೆ ತಾನು ಅರ್ಥ ಮಾಡಿಕೊಂಡಂತೆ ಅಪ್ಪನ ಈ ಪರಿಯ ಸಾವಿನಿಂದ ದುಃಖಕ್ಕಿಂತ ನಿರಾಳತೆಯೇ ಜಾಸ್ತಿ ಆಗಿರುತ್ತದೇನೋ ಎಂದು ಮಿಹಿರ ಒಳಗೊಳಗೇ ನಿರ್ಧಾರಕ್ಕೆ ಬಂದುಬಿಟ್ಟಿದ್ದ.

ರಾಶಿ ಸುದ್ದಿ ಕೇಳಿ ಆಸ್ಪತ್ರೆಗೆ ಬಂದವಳು ಅತ್ತೆ ದನಿ ತೆಗೆದು ಅಳದ ಬಗ್ಗೆ ಮಿಹಿರನಲ್ಲಿ ಆಶ್ಚರ್ಯ ವ್ಯಕ್ತಪಡಿಸಿದ್ದಳು. ಅ"ಮ್ಮನನ್ನ ಅರ್ಥ ಮಾಡಿಕೊಳ್ಳಬೇಕಾದರೆ ನಿನ್ನ ತಲೆಗೂದಲು ಬೆಳ್ಳಗಾಗಬೇಕು' ಎಂದು ಅಪ್ಪನದೇ ಡೈಲಾಗ್ ಹೇಳಿ ತುಟಿಕಚ್ಚಿಕೊಂಡಿದ್ದ, ಅಮ್ಮನೆಲ್ಲಿಯಾದರೂ ಕೇಳಿಸಿಕೊಂಡಾಳೆಂದು.

'ಬೇಗ ಬೇಗ ಆಸ್ಪತ್ರೆಯ ಫಾರ್ಮಾಲಿಟಿ ಮುಗಿಸು, ಮುಂದಿನ ಕಾರ್ಯ ಇದೆ' ಚಿಕ್ಕಪ್ಪ ಅವಸರಿಸಿದಾಗ ಮಿಹಿರನಿಗೆ ತಟ್ಟನೆ ತಾನೆಷ್ಟು ದಿನ ರಜೆ ಹಾಕಬೇಕಾಗುತ್ತೋ; ವಿಷಯ ತಿಳಿದರೆ ಬಾಸ್ ಇಲ್ಲ ಎನ್ನಲಿಕ್ಕಿಲ್ಲ. ಆದರೆ ತಾನು ತನ್ನದೇ ಗುಂಪಿನಲ್ಲಿ ಹಿಂದುಳಿದುಬಿಡುತ್ತೇನೆ. ಯಾವುದಕ್ಕೂ ಕಾಯದ, ಯಾರಿಗೂ ಬಗ್ಗದ ಈ ಕಾರ್ಪೋರೇಟ್ ಜಗತ್ತು ಇನ್ನು ಕನಿಷ್ಠ ಹದಿನೈದು ಇಪ್ಪತ್ತು ದಿನಗಳ ತನ್ನ ಅನುಪಸ್ಥಿತಿಯಲ್ಲಿ ಅದೆಷ್ಟು ಮುನ್ನಡೆದು ಬಿಟ್ಟಿರುತ್ತದೋ ಎಂದು ಆತಂಕವಾಯಿತು. ತಟ್ಟನೆ ಅಪ್ಪ ನೆನಪಾಗಿ ಕೆನ್ನೆಗೆ ಹೊಡೆದುಕೊಂಡ. ಆಕಾಶದಂತ ಅಪ್ಪ ಇಲ್ಲವಾದಾಗ ತಾನು ಹೀಗೆಲ್ಲಾ ಯೋಚಿಸುವಂತೆ ಮಾಡಿದ ಈ ಜಗತ್ತಿಗೆ ಗೋಲಿ ಹೊಡೀಬೇಕು ಎಂದು ಗುರುಗುಟ್ಟುತ್ತಾ ಅಮ್ಮನನ್ನು ಮನೆಗೆ ಕರೆದೊಯ್ಯಲು ರಾಶಿಗೆ ಹೇಳಿ ಅಪ್ಪನನ್ನು ತೆಗೆದುಕೊಂಡು ಹೋಗುವ ವ್ಯವಸ್ಥೆಯಲ್ಲಿ ಮುಳುಗಿದ. ರಾಶಿ ಅಮ್ಮನೊಂದಿಗೆ ಮನೆ ತಲುಪಿದ ಕೆಲವೇ ಕ್ಷಣಗಳಲ್ಲಿ ಮಿಹಿರನಿಗೆ ಫೋನು.

'ಇಲ್ಲಿಗೆ ಅಪ್ಪನ ಬಾಡಿ ತೆಗೆದುಕೊಂಡು ಬರುವ ಹಾಗಿಲ್ಲವಂತೆ' ಎಂಬ ಮಾತಿನಿಂದ ಮಿಹಿರನಿಗೆ ಏನೂ ಅರ್ಥವಾಗಲಿಲ್ಲ. ಏನಂತೆ, ಯಾರು ಹೇಳಿದ್ದು, ಯಾಕಂತೆ ಎಂದು ಚಿಕ್ಕಪ್ಪನೇ ಮಾತಾಡಿದರು. ಅಪಾರ್ಟ್‌ಮೆಂಟಿನ ಕಮಿಟಿ ಪ್ರೆಸಿಡೆಂಟು ಅತ್ತಲಿಂದ ಫ್ಲ್ಯಾಟ್ ಕೊಳ್ಳುವ ಮುನ್ನ ಎಲ್ಲರೂ ಒಪ್ಪಿರುವ ಕರಾರು ನೆನಪಿಸಿ, 'ಸಾರಿ ಸಾರಿ, ರೂಲಂದ್ರೆ ರೂಲು, ಏನೂ ಮಾಡಕ್ಕಾಗಲ್ಲ ನೀವು ಬೇರೆಲ್ಲಾದರೂ ವ್ಯವಸ್ಥೆ ಮಾಡಿಕೊಳ್ಳಿ' ಎಂದು ಬಡಬಡಿಸುತ್ತಿದ್ದ. ಮಿಹಿರ ಕಕ್ಕಾಬಿಕ್ಕಿಯಾದ. ಹೀಗೂ ಒಂದು ಕರಾರು ಇದೆಯೆ? ಅದೂ ಕ್ರಯಪತ್ರದಲ್ಲಿ? ತಾನು ಗಮನಿಸದೇ ಸೈನ್ ಮಾಡಿದೆನಾ ಹಾಗಾದರೆ? ಅಪ್ಪನನ್ನ ಮನೆಗೆ ತೆಗೆದುಕೊಂಡು ಹೋಗುವ ಹಾಗಿಲ್ಲವಾ? ಯಾವನೋ ಇಂತಾ ಟೈಮಲ್ಲೂ ತಮಾಷೆ ಮಾಡ್ತಾ ಇದಾನೆ ಎನಿಸಿ ಪಕ್ಕದ ಫ್ಲ್ಯಾಟಿನ ಅನುರಾಗ್ ತಿವಾರಿಗೆ ಫೋನಾಯಿಸಿದ. 'ಹಾ ಭಾಯಿ, ಮ್ಯಾನೇಜರ್ ವಹೀ ಬಾತ್ ಕರ್ ರಹಾ ಹೈ, ಮೈ ನೆ ಭೀ ಅಪನಾ ಫ್ಲ್ಯಾಟ್ ಕಾ ಸೇಲ್ ಡೀಡ್ ದೇಖಾ ಹಾ ಉಸ್ಮೆ ಹೈ... ಪಕ್ಕಾ ಹೈ... ಲೆಕಿನ್ ಲಗತಾ ಹೈ ಫ್ಲ್ಯಾಟ್ ಖರೀದ್ ತೆ ವಕ್ತ್ ಕಿಸೀ ನೆ ಭೀ ಇಸ್ ಪರ್ ಧ್ಯಾನ್ ನಹೀ ದಿಯಾ ಹೋಗಾ... ಅಬ್ ಕೈಸೆ ಕರೋಗೆ? ಯಹಾ ತೊ ಸಬ್ ಲೋಗ್ ಇಕಟ್ಟೆ ಹೊ ಚುಕೆ ಹೈ. ಕೋಯಿ ಭೀ ಆಪ್ ಕೊ